ಮುಜರಾಯಿ ದೇವಾಲಯಗಳು

2293 (778); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಮುಜರಾಯಿ ದೇವಾಲಯಗಳಿಗೆ ನೀಡುತ್ತಿರುವ ತಸ್ತೀಕ್ ಹಣವನ್ನು ಯಾವ ರೀತಿಯ ದೇವಾಲಯಗಳಿಗೆ ಯಾವ ಉದ್ದೇಶಕ್ಕಾಗಿ ನೀಡಲಾಗುತ್ತಿದೆ;

ಆ) ಸದರಿ ವಿತರಿಸಲಾಗುತ್ತಿರುವ ತಸ್ತೀಕ್ ಹಣದ ಪ್ರಮಾಣವೆಷ್ಟು; ಯಾವ ರೀತಿಯಲ್ಲಿ ವಿತರಿಸಲಾಗುತ್ತಿದೆ; (ಜಿಲ್ಲಾವಾರು/ತಾಲ್ಲೂಕುವಾರು/ ದೇವಾಲಯವಾರು ಮಾಹಿತಿ ಒದಗಿಸುವುದು);

ಇ) ತಸ್ತೀಕ್ ಹಣದ ವಿತರಣಾ ಉದ್ದೇಶವವು ಫಲಪ್ರದವಾಗಿದೆಯೆ; ಸದರಿ ಹಣವು ದೇವಾಲಯಗಳಿಗೆ ಸಾಕಾಗುತ್ತಿದೆಯೇ;

ಈ) ಮುಜರಾಯಿ ದೇವಾಲಯಗಳಿಗೆ ವಿತರಿಸಲಾಗುತ್ತಿರುವ ತಸ್ತೀಕ್ ಹಣದ ಪ್ರಮಾಣವನ್ನು ಹೆಚ್ಚಿಸುವವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಂ ಜಮೀನುಗಳು ಇನಾಂ ರದ್ದಿಯಾಯ್ತಿ ಕಾಯ್ದೆಯ ಅನ್ವಯ ಸರ್ಕಾರಕ್ಕೆ ವಿಹಿತಗೊಂಡಿದ್ದು, ಈ ಜಮೀನುಗಳ ಪರಿಹಾರಾರ್ಥವಾಗಿ ತಸ್ತೀಕ್ ಹಣವನ್ನು ನೀಡಲಾಗುತ್ತಿದೆ. ತಸ್ತೀಕ್ ಮೊತ್ತವನ್ನು ದೇವಾಲಯದ ನಿರ್ವಹಣೆಗಾಗಿ ನೀಡಲಾಗುತ್ತಿದೆ.

ಆ) ಪ್ರಸ್ತುತ ತಸ್ತೀಕ್ ಮೊತ್ತವನ್ನು ವಾರ್ಷಿಕ ಕನಿಷ್ಠ ₹ 24,000–00 ಗಳಂತೆ ನೀಡಲಾಗುತ್ತಿದೆ. ತಸ್ತೀಕ್ ಬಿಡುಗಡೆ ಮಾಡಲಾದ ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.

ಇ) ಹೌದು.

ಈ) ಈ ಹಿಂದೆ ನೀಡುತ್ತಿರುವ ₹ 24,000–00 ಗಳನ್ನು 2015–16 ನೇ ಸಾಲಿನಿಂದ ₹ 36,000–00 ಗಳಿಗೆ ಹೆಚ್ಚಿಸಲು ಆಯವ್ಯಯದಲ್ಲಿ ಘೋಷಿಸಲಾಗಿದ್ದು, ಅದರ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

2014-15ನೇ ಸಾಲಿನ ಲೆಕ್ಕ ಶೀರ್ಷಿಕೆ '2075-00-101-1-01 (100) - ತಸ್ತೀಕ್ ಭತ್ಯೆ'
ಇವರಡಿಯಲ್ಲಿ
ಬಿಡುಗಡೆ ಮಾಡಿದ ಅನುದಾನಗಳ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ	ಬಿಡುಗಡೆ ಮಾಡಿರುವ ತಸ್ತೀಕ್ ಮೊತ್ತ
1	ಬಾಗಲಕೋಟೆ	30,856,000.00
2	ಬೆಂಗಳೂರು ಗ್ರಾಮಾಂತರ	37,703,324.00
3	ಬೆಂಗಳೂರು ನಗರ	32,115,480.00
4	ಬೆಳಗಾವಿ	40,224,000.00
5	ಬಳ್ಳಾರಿ	11,952,000.00
6	ಬೀದರ್	6,552,000.00
7	ಬಿಜಾಪುರ	18,792,000.00
8	ಚಾಮರಾಜನಗರ	3,912,000.00
9	ಚಿಕ್ಕಮಗಳೂರು	23,345,276.00
10	ಚಿಕ್ಕಬಳ್ಳಾಪುರ	25,393,047.00
11	ಚಿತ್ರದುರ್ಗ	[illegible]
12	ದಕ್ಷಿಣ ಕನ್ನಡ	12,556,000.00

13	ದಾವಣಗೆರೆ	13,128,000.00
14	ಧಾರವಾಡ	15,420,883.00
15	ಗದಗ	18,696,000.00
16	ಗುಲ್ಬರ್ಗಾ	11,256,000.00
17	ಯಾದಗಿರಿ	8,688,000.00
18	ಹಾಸನ	62,191,429.00
19	ಹಾವೇರಿ	14,568,000.00
20	ಕೊಪ್ಪಳ	17,784,000.00
21	ಕೋಲಾರ	50,621,538.00
22	ಕೊಡಗು	120,000.00
23	ಮಂಡ್ಯ	47,030,259.00
24	ಮೈಸೂರು	27,832,870.00
25	ರಾಯಚೂರು	32,808,000.00
26	ರಾಮನಗರ	21,585,864 00
27	ಶಿವಮೊಗ್ಗ	13,157,477.00
28	ತುಮಕೂರು	62,157,082.00
29	ಉಡುಪಿ	24,636,000.00
30	ಉತ್ತರ ಕನ್ನಡ	7,590,585.00
	ಒಟ್ಟು	699,999,087.00